ಶ್ರೀ ಎ. ಲಕ್ಷ್ಮೀಸಾಗರ್.—ಮಂತ್ರಿಗಳು ಸಂಮ್ಮನೆ ಕುಳಿತಿದ್ದಾರೆ. ಉತ್ತರ ಹೇಳಲಿಲ್ಲ ಅಂದರೆ ಸರ್ಕಾರ ಕೆಲಸ ಮಾಡುವುದು ಹೇಗೆ. ಈಗಾಗಲೇ ನಾನು ಹೇಳಿದ್ದೇನೆ. ಇದರ ಬಗ್ಗೆ ತಮಗೆ ನೋಟೀಸ್ ಬರಲಿ. ಸಂಬಂಧಪಟ್ಟ ಮಾಹಿತಿಯನ್ನು ತರಿಸಿ, ವಿಚಾರಮಾಡಿ, ಈ ಸಭೆಗೆ ಒಂದು ಹೇಳಿಕೆ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಚಿತ್ರದುರ್ಗ ಜಿಲ್ಲೆಯ ಜನತಾ ಮನೆಗಳ ಬಗ್ಗೆ ಇವತ್ತು ಹೇಳಿಕೆ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ನೋಟೀಸ್ ಬರದೆ ಹೇಗೆ ಕಳಿಸುವುದು.

ಶ್ರೀ ಎಸ್. ಬಂಗಾರಪ್ಪ.—ನಾಲ್ಕೈದು ದಿವಸ ಟೈಂ ಕೊಟ್ಟಿದ್ದೇವೆ. ಇನ್ನೇನು ಐದಾರು ದಿವಸ ಟೈಂ ಕೊಡುವುದಕ್ಕಾಗುತ್ತದೆಯೇ ?

ಅಧ್ಯಕ್ಷರು.—ಇವತ್ತಿಗೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಸೋಮವಾರ ಹೇಳಿಕೆ ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅದು ನನ್ನ ಕೈಗೆ ಬಂದಿಲ್ಲ. ಮಾನ್ಯ ಅಧ್ಯಕ್ಷರೂ ಕೂಡ ನನಗೆ ಬಂದಿಲ್ಲ ಎಂದು ಹೇಳುತ್ತಾ ಇದ್ದಾರೆ. ಇದರ ಬಗ್ಗೆ ನಾನು ಆದಷ್ಟು ಬೇಗ ಮಾಹಿತಿ ತರಿಸಿ, ಪೂರ್ಣವಾಗಿ ವಿಚಾರಮಾಡಿ ಈ ಸಭೆಗೆ ಒಂದು ಹೇಳಿಕೆ ಕೊಡುತ್ತೇನೆ. ಸೋಮವಾರ, ಮಂಗಳವಾರ ಎಂದು ಹೇಳಲಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಇವತ್ತು ವರಮಹಾಲಕ್ಷ್ಮಿ ಹಬ್ಬವಿದೆ, ಹಬ್ಬ ಕಳೆದ ಮೇಲೆ ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಬ್ಬಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಈ ರೀತಿ ಲಘುವಾಗಿ ಭಾಷಣೆ ಮಾಡಬಾರದು, ಇದು ಸದನಕ್ಕೆ ಗೌರವ ತರುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ, ಅದಕ್ಕೆ ಉತ್ತರ ಹೇಳುವುದಕ್ಕೆ ಫಡಿ, ನಿಮಿಷ ಫಿಕ್ಸ್ ಮಾಡಿದರೆ ಹೇಗೆ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಬಹಳ ಕಷ್ಟವಾಗುತ್ತದೆ. ಹಾಗಾದರೆ ನಿಮಗೆ ಹಾಗೆಯೇ ಬಿಟ್ಟುಬಿಡಬೇಕಾ ? ೪೧ ಲಕ್ಷ ರೂಪಾಯಿಗಳನ್ನು ಕಳಿಸಿಕೊಡುವುದಕ್ಕಾಗದೇ ಸಾವಿರಾರು ಜನ ಧರಣಿ ಕುಳಿತಿದ್ದಾರೆ.

ಅಧ್ಯಕ್ಷರು.—ಈ ದಿವಸ ಇಲ್ಲ, ಕಳಿಸುವುದಕ್ಕೆ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ನಾನು ಮೊದಲೇ ನೋಟೀಸ್ ಕಳಿಸಿಕೊಟ್ಟಿದ್ದೇನೆ.

ಶ್ರೀ ಕೆ. ಶಿವಮೂರ್ತಿ.—ಬಡವರು ಸಾವಿರಾರು ಜನ ಧರಣಿ ಕುಳಿತಿದ್ದಾರೆ, ಅರ್ಧಂಬರ್ಧ ಕಟ್ಟಿದ ಜನತಾ ಮನೆಗಳು ಮಳೆಯಿಂದ ಬಿದ್ದು ಹೋಗಿವೆ.

ಅಧ್ಯಕ್ಷರು.—ಈ ಲಿಸ್ಟ್‌ನಲ್ಲಿ ಗಮನ ಸೆಳೆಯುವ ಸೂಚನೆ ಎಂದು ಇದೆ,

ಶ್ರೀ ಎಸ್‌ಬಂಗಾರಪ್ಪ.—ಅದು ಹಿಂದು. ಮೊನ್ನೆ ತಡವಾಗಿ ೩೩ಳಿರ ಪ್ರಕಾರ ಮತ್ತೊಂದು ನೋಟೀಸ್‌ಕಳಿಸಿಕೊಟ್ಟಿದ್ದೇನೆ. ಸೋಮವಾರ ಹೇಳಿಕೆ ಕೊಡುತ್ತೇವೆ ಅಂದರೆ ಸಾಕು.

ಗಮನ ಸೆಳೆಯುವ ಸೂಚನೆ

ವಿಷಯ.—ಬಿ. ಇ. ಪದವೀಧರರ ಪರೀಕ್ಷೆ ತಡವಾಗಿ ನಡೆಯುತ್ತಿರುವ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ವಿಶ್ವವಿದ್ಯಾನಿಲಯ ಮೊದಲನೇ ಮತ್ತು ಎರಡನೇ ವರ್ಷ ಇಂಜನಿಯರಿಂಗ್ ಪರೀಕ್ಷೆಗಳನ್ನು ನಡೆಸಲು ನಿಧಾನ ಮಾಡಿರುವುದರ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು, ಸಂಸದೀಯ ಹಾಗೂ ವಸತಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯಾ ಮಂತ್ರಿಗಳ ಪರವಾಗಿ ತಮ್ಮ ಅನುಮತಿ ಕೋರಿ ಹೇಳಿಕೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ.

ಬಿ. ಇ. ಪದವಿಯ ವಾರ್ಷಿಕ ಪರೀಕ್ಷೆಗಳು ಸಾಮಾನ್ಯವಾಗಿ ಶೈಕ್ಷಣಿಕ ವರ್ಷದ ಮೇ, ಜೂನ್ ತಿಂಗಳಲ್ಲಿ ನಡೆಯುತ್ತವೆ. ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲ್‌ಗಳ ಸಭೆಯನ್ನು ನಡೆಸಿದ ನಂತರ, ಸಕಾಲಕ್ಕೆ ಪಠ್ಯಕ್ರಮಗಳು ಮುಗಿದಿಲ್ಲವಾದುದರಿಂದ ಇಂಜಿನಿಯರಿಂಗ್ ಪರೀಕ್ಷೆಗಳನ್ನು ೮-೮-೧೯೮೩ ರಿಂದ ನಡೆಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಆದರಂತೆಯೇ ದಿನಾಂಕ ೮-೮-೧೯೮೩ ರಿಂದ ಮೊದಲನೇ ವರ್ಷದ ಬಿ. ಇ. ಪರೀಕ್ಷೆಗಳು ನಡೆಯಬೇಕಾಗಿತ್ತು. ಆದರೆ ೫-೮-೮೩ ರಿಂದ ವಿಶ್ವವಿದ್ಯಾಲಯದ ಶಿಕ್ಷಕ ಹಾಗೂ ಶಿಕ್ಷಕೇತರ ನೌಕರರು ಮುಷ್ಕರದಲ್ಲಿದ್ದುದರಿಂದ ವಿಶ್ವವಿದ್ಯಾನಿಲಯಕ್ಕೆ ಪರೀಕ್ಷೆಗಳನ್ನು ಮುಂದೂಡದೆ ಬೇರೆ ಮಾರ್ಗವಿರಲಿಲ್ಲ.

ದಿನಾಂಕ ೧೭—೮—೮೩ ರಿಂದ ವಿಶ್ವವಿದ್ಯಾನಿಲಯದ ಕೆಲಸ ಕಾರ್ಯಗಳು ಯಥಾಸ್ಥಿತಿಗೆ ಮರಳಿರುವುದರಿಂದ, ಬಿ. ಇ. ಪದವಿಯ ಪರೀಕ್ಷೆಗಳನ್ನು ಕೆಳಗಿನಂತೆ ನಡೆಸಲು ನಿಗದಿಪಡಿಸಲಾಗಿದೆ.

೧ನೇ ಬಿ. ಇ. (ವಾರ್ಷಿಕ ಪದ್ಧತಿ)	,,	೨೫—೮—೧೯೮೩
೨ನೇ ಬಿ. ಇ. — ,, —	,,	೧೨—೯—೧೯೮೩
೩ನೇ ಬಿ. ಇ. — ,, —	,,	೧೩—೯—೧೯೮೩

೨—೩೦ ಪಿ. ಎಂ.

ಶ್ರೀ ಎಂ, ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಹಲವಾರು ಪ್ರಶ್ನೆಗಳು ಅಡಕವಾಗಿವೆ. ಅದಕ್ಕೆ ಸಮಗ್ರವಾದಂಥ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿಲ್ಲ. ಏತಕ್ಕೆಂದರೆ, ಬಿ. ಎಡ್. ಡಿಗ್ರಿಯಲ್ಲಿ ಓದತಕ್ಕಂತ ೬ ಸಾವಿರ ಹುಡುಗರು ಇದ್ದಾರೆ. ಸಾಮಾನ್ಯವಾಗಿ ಇವರಿಗೆ ಮೇ, ಜೂನ್‌ನಲ್ಲಿ ಒಂದು ಪರೀಕ್ಷೆ ಸೆಪ್ಟೆಂಬರ್‌ನಲ್ಲಿ ಒಂದು ಪರೀಕ್ಷೆ ನಡೆಸಬೇಕು. ಅಂಥಾದ್ದರಲ್ಲಿ ಎಲ್ಲಾ ಪರೀಕ್ಷೆಗಳೂ ಮುಂದಕ್ಕೆ ಮುಂದಕ್ಕೆ ಹೋಗುತ್ತಿವೆ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ, ಸಿಲಬಸ್ ಮಾಡಿಲ್ಲ, ಪೋರ್ಷನ್ ಮುಗಿಸಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಾರೆ. ಆದರೆ ಇದರ ಜವಾಬ್ದಾರಿ ಯಾರದು ? ನೀವು ಇವತ್ತಿನ ದಿವಸ ಬೆಂಗಳೂರು ವಿಶ್ವವಿದ್ಯಾನಿಲಯದ ಮೇಲೆ ಸರಿಯಾದ ಹತೋಟಿಯನ್ನಿಟ್ಟು ಕೊಂಡಿಲ್ಲ. ಅಲ್ಲಿ ಒಳಗೊಳಗೇ ಅಧಿಕಾರಿಗಳಲ್ಲಿ ಜಗಳಗಳು ಇವೆ. ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಪ್ರೊಫೆಸರ್ ಬಂದರೆ, ಪ್ರಿನ್ಸಿಪಾಲರು ಬರುವುದಿಲ್ಲ. ಪ್ರಿನ್ಸಿಪಾಲರು ಬಂದರೆ ಪ್ರೊಫೆಸರ್‌ಗಳು ಬರುವುದಿಲ್ಲ. ಆದುದರಿಂದ ಈ ರೀತಿಯ ಉತ್ತರವನ್ನು ಸರ್ಕಾರದವರು ಕೊಟ್ಟರೆ ಅದರಿಂದ ೬ ಸಾವಿರ ಹುಡುಗರ ಸಮಸ್ಯೆ ಇತ್ಯರ್ಥವಾದಹಾಗಾಗಲಿಲ್ಲ. ಆದುದರಿಂದ ಇದರ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಕೈಗೊಂಡು ನಿಶ್ಚಿತವಾದಕ್ಕೆ ಕಾಲಕ್ಕೆ ಪರೀಕ್ಷೆಗಳನ್ನು ನಡೆಸಬೇಕು, ಇಲ್ಲದೇ ಹೋದರೆ ಮುಂದಕ್ಕೆ ಅವರಿಗೆ ಉದ್ಯೋಗ ಸಿಗುವುದಕ್ಕೂ ಕಷ್ಟವಾಗುತ್ತದೆ. ಆದುದರಿಂದ ಇದರ ಬಗ್ಗೆ ಸರಿಯಾದ ಕ್ರಮವನ್ನು ಕೈಗೊಳ್ಳುವ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯವನ್ನು ಅರ್ಥ ಮಾಡಿಕೊಂಡಿದ್ದೇನೆ. ಅಲ್ಲಿ ಏನಾಗಿದೆ ಎಂದರೆ, ಪಠ್ಯಕ್ರಮಗಳು ಕಾಲೇಜ್‌ನಲ್ಲಿ ಸಮಯಕ್ಕೆ ಸರಿಯಾಗಿ ಮುಗಿಯದೇ ಇರುವುದರಿಂದ ಪರೀಕ್ಷೆಗಳು ಮುಂದಕ್ಕೆ ಹೋಗಿವೆ, ಇದು ಮೊದಲನೆಯದು. ಎರಡನೆಯದಾಗಿ, ಪೋರ್ಷನ್ ಪೂರ್ತಿಯಾಗದೇ ಇದ್ದಾಗ ಸ್ಪೆಷಲ್ ಕ್ಲಾಸ್ ಮಾಡಿದರೆ ಹುಡುಗರು ಬರುವುದಿಲ್ಲ. ಇದನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಇಲ್ಲಿಯ ವಾತಾವರಣವೇ ಹಾಗಿದೆ. ಇದು ನಡೆಯುತ್ತಿರತಕ್ಕದ್ದು. ಇನ್ನು ಅಧ್ಯಾಪಕ ವರ್ಗದವರಲ್ಲಿ ಜಗಳವೇನಾಗುತ್ತಿದೆ ಅದು ಆಗಬಾರದಂ. ಇಂಥಾ ಯಾವ ಕಾರಣವೂ ಸಬೂಬು ಹೇಳದೇ ಕಾಲ ಕಾಲಕ್ಕೆ ಕಟ್ಟುನಿಟ್ಟಾಗಿ ಪರೀಕ್ಷೆಗಳನ್ನು ನಡೆಸತಕ್ಕ ನಿರ್ಧಾರವನ್ನು ಕೈಗೊಂಡಿದೆ ಎನ್ನತಕ್ಕ ಮಾತನ್ನು ಮತ್ತೊಮ್ಮೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ವಿದ್ಯಾಮಂತ್ರಿಗಳು ಇದ್ದಿದ್ದರೆ ಹೇಳುತ್ತಿದ್ದೆ. ಏತಕ್ಕೆಂದರೆ, ಬೆಂಗಳೂರು ಯೂನಿವರ್ಸಿಟಿಯ ಕೆಲವು ಪರೀಕ್ಷೆಯ ಫಲಿತಾಂಶಗಳು ಮೊನ್ನೆ ತಾನೇ ಬಂತು. ಕಾಲಕ್ಕೆ ಸರಿಯಾಗಿ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಹೇಳದೇ ಸಬೂಬು ಹೇಳುತ್ತಾ ಕೂತರೆ ಏನು ಪ್ರಯೋಜನ ? ತಂದೆ ತಾಯಿಗಳು ಮಗನ ವಿದ್ಯಾಭ್ಯಾಸಕ್ಕೆಂದು ೧೦ ತಿಂಗಳ ಮಟ್ಟಿಗೆ ವ್ಯವಸ್ಥೆ ಮಾಡಿಕೊಂಡಿರಬಹುದಾಗಿರುತ್ತಾರೆ. ಈ ರೀತಿ ಮುಂದುವರಿಸುವುದರಿಂದ ಅವರಿಗೆ ತೊಂದರೆಹಾಗುವುದಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಅಭಿಪ್ರಾಯ ಅರ್ಥವಾಯಿತು. ಇದರಲ್ಲಿ ಸರ್ಕಾರದವರ ಜವಾಬ್ದಾರಿ ಕೂಡ ಉಂಟು ಮತ್ತು ವಿಶ್ವವಿದ್ಯಾನಿಲಯದವರ ಜವಾಬ್ದಾರಿ ಉಂಟು. ಮತ್ತು ಇದರಲ್ಲಿ ಸಮಾಜದ ಜವಾಬ್ದಾರಿ ಕೂಡ ಉಂಟು.

ಶ್ರೀ ಎಂ. ಎಸ್, ಕೃಷ್ಣನ್.—ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇಷ್ಟೆಲ್ಲಾ ತೊಂದರೆಗಳಿದ್ದರೂ ಸಹ ಅಲ್ಲಿಯ ವೈಸ್ ಚಾನ್ಸಲರ್ ಹೇಳದೇ ಕೇಳದೇ ಟೂರ್ ಹೊರಟು ಹೋಗುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ತಾವು ಗಮನಕ್ಕೆ ತಂದಿದ್ದೀರಿ, ಅದರ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶಾಸನ ರಚನಾ ಕಾರ್ಯಕ್ರಮಗಳು.

ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ (ತಿದ್ದುಪಡಿ) ವಿಧೇಯಕ, ೧೯೮೩

ಪರಿಶಿಲನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು, ಸಂಸದೀಯ ವ್ಯವಹಾರ ಹಾಗೂ ವಸತಿ ಖಾತೆಯ ಮಂತ್ರಿಗಳು.—ಮಾನ್ಯ ಅಧ್ಯಕ್ಷರೇ, ಕೈಗಾರಿಕ ಮಂತ್ರಿಗಳ ಪರವಾಗಿ ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸುತ್ತೇನೆ.

ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ (ತಿದ್ದುಪಡಿ) ವಿಧೇಯಕ, ೧೯೮೩ವನ್ನು ಸಭೆಯು ಪರಿಶೀಲಿಸುವುದು.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

ಕರ್ನಾಟಕ ಖಾದಿ ಮತ್ತು ಗಾಮೋದ್ಯೋಗ (ತಿದ್ದುಪಡಿ) ವಿಧೇಯಕ, ೧೯೮೩ ವನ್ನು ಸಭೆಯಂತೆ ಪರಿಶೀಲಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಇದು ಹಿಂದಿನ ಸರ್ಕಾರದವರು ತಯಾರು ಮಾಡಿದಂಥ ಒಂದು ಮಸೂದೆಯಾಗಿದೆ. ಸಮಯವಿಲ್ಲದೇ ಇದ್ದ ಕಾರಣ ಇದನ್ನು ಸಭೆಯ ಮುಂದೆ ತರುವುದಕ್ಕೆ ಆಗಲ್ಲಿಲ್ಲ. ಇದು ಖಾದಿ ಮತ್ತು ಗ್ರಾಮೋದ್ಯೋಗ ನೌಕರರಿಗೆ ಸಂಬಂಧಪಟ್ಟದ್ದು. ಇದರಲ್ಲಿ ಅವರಿಗೆ ಕೊಡತಕ್ಕ ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆಂದು ತಾತ್ವಿಕವಾಗಿ ಒಪ್ಪಿಕೊಂಡ ಮೇಲೆ ಕಾನೂನು ಮೂಲಕ ಅವರಿಗೆ ಅಧಿಕಾರವನ್ನು ಕೊಡುವುದಕೋಸ್ಕರವಾಗಿ ಈ ತಿದ್ದುಪಡಿಯನ್ನು ತರಲಾಗಿದೆ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕು. ಇದರಲ್ಲಿ ಏನೋ ಚರ್ಚೆ ಮಾಡುವಂಥಾ ವಿಷಯವಿಲ್ಲವೆಂದು ನನಗನ್ನಿಸುತ್ತದೆ ಇದು ನನ್ನ ಅಭಿಪ್ರಾಯ. ಆದುದರಿಂದ ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಒಪ್ಪಿಗೆ ಕೊಡುತ್ತಾರೆಂದು ನಂಬಿದ್ದೇನೆ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ಈ ಖಾದಿ ಮತ್ತು ಗ್ರಾಮೋದ್ಯೋಗ ನೌಕರರಿಗೆ ಏನು ಪೆನ್‌ಷನ್ ಕೊಡಬೇಕೆಂದು ತಿದ್ದುಪಡಿಯನ್ನು ತಂದಿದ್ದೀರಿ, ಇದಕೋಸ್ಕರವಾಗಿ ಏತಕ್ಕೆ ಆರ್ಡಿನೆನ್ಸ್‌ನ್ನು ತೆಗೆದುಕೊಂಡು ಬಂದಿರಿ ? ಇಷ್ಟು ಆತುರಾತುರವಾಗಿ ತರತಕ್ಕ ಅವಶ್ಯಕತೆಯಾದರೂ ಏನಿತ್ತು ? ಇದೇ ರೀತಿ ಬೇರೆ ಖಾಸಗಿ ಸಂಸ್ಥೆಗಳವರಿಗೆ ಪೆನ್‌ಷನ್ ಬೆನಿಫಿಟ್ ಇಲ್ಲದೇ ಇರುವಾಗ ಇವರಿಗೆ ಮಾತ್ರ ಇಷ್ಟು ಆತುರಾತುರವಾಗಿ ಅದೂ ಆರ್ಡಿನೆನ್ಸ್ ಮುಖಾಂತರವಾಗಿ ತರುವುದಕ್ಕೆ ಕಾರಣವೇನಿತ್ತು ? ಇದನ್ನು ಯಾವ ಆಧಾರದ ಮೇಲೆ ತಂದಿದ್ದೀರಿ ? ನಿಮ್ಮ ನಾಯಕರು ಏನಾದರೂ ಚುನಾವಣಾ ಪ್ರಣಾಳಿಕೆಯಲ್ಲಿ